ಅದಕ್ಕಾಗಿ ಮಾಡಿದ್ದಾರೆ. ನಮ್ಮ ಸರ್ಕಾರದವರು ಯಾರಾದರೂ ಪ್ರಭಾವ ಬೀರಿದ್ದಾರೋ ಇಲ್ಲವೋ ಗೊತ್ತಿಲ್ಲ, ಆದ್ದರಿಂದ ಕರ್ನಾಟಕ ಸರ್ಕಾರದ ವತಿಯಿಂದ ಕಲಂ 371ಕ್ಕೆ ಅಮೆಂಡ್‌ಮೆಂಟ್ ಮಾಡುವ ಸಲುವಾಗಿ ರೆಸಲ್ಯೂಷನ್ ಮಾಡಲು ಸರ್ಕಾರ ತಯಾರು ಇದೆಯೇ ಇಲ್ಲವೇ ಎಂಬುದನ್ನು ಹೇಳಬೇಕು.

ಡಾ|| ಎಂ. ಶಂಕರ್‌ನಾಯಕ್ : ಮಾನ್ಯ ಅಧ್ಯಕ್ಷರೆ, ಈಗ ನಾವು ಎಲ್ಲಾ ರಾಜ್ಯಗಳ ಆರೋಗ್ಯ ಸಚಿವರನ್ನು ಕರೆಸಿ ಕೆಎಂಸಿ ಆಕ್ಟ್ ಅಮೆಂಡ್ ಮಾಡುವುದರ ಬಗ್ಗೆ ಕೇಂದ್ರ ಸರ್ಕಾರದಿಂದ ಏನಾದರೂ ಕಾನೂನು ತರಬೇಕೇ ಎನ್ನುವುದರ ಬಗ್ಗೆ ಚಿಂತನೆ ನಡೆಯುತ್ತಾ ಇದೆ. ಎಲ್ಲಾ ರಾಜ್ಯದ ಆರೋಗ್ಯ ಸಚಿವರನ್ನು ಕರೆದು ಸಭೆ ಮಾಡಿ ಒಂದು ತೀರ್ಮಾನವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆ 11ಗಂಟೆಗೆ ಚಿಂತಾಮಣಿ ತಾಲ್ಲೂಕು ಬಿಲ್ಲಾಳ್ ಹಳ್ಳಿಯಲ್ಲಿ ದಲಿತರ ಸಭೆ ನಡೆಯುತ್ತಾ ಇತ್ತು. ಆ ಸಂದರ್ಭದಲ್ಲಿ ಗಲಾಟೆಯಾಗಿ ಸುಮಾರು 3 ಜನ ಪೋಲಿಸರು ಸತ್ತಿರುತ್ತಾರೆ, 20 ಜನರಿಗೆ ತೀವ್ರ ಗಾಯವಾಗಿದೆ ಎಂದು ಗೊತ್ತಾಗಿದೆ, ಅದರ ಬಗ್ಗೆ ಹೇಳಬೇಕು.

ಗೃಹ ಸಚಿವರ ಹೇಳಿಕೆ

ಚಿಂತಾಮಣಿಯಲ್ಲಿ ನಡೆದ ಗೋಲಿಬಾರ್ :

+ ಶ್ರೀ ಆರ್. ರೋಷನ್ ಬೇಗ್ (ರಾಜ್ಯ ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಕೋಲಾರ ಜಿಲ್ಲೆಯ ಚಿಂತಾಮಣಿ ತಾಲ್ಲೂಕು ವ್ಯಾಪ್ತಿಯಲ್ಲಿ ತುಂಗಂಪಲ್ಲಿ ಎಂದು ಊರು ಕೆಂಚಾನಹಳ್ಳಿ ಪೋಲೀಸ್ ಸ್ಟೇಶನ್ ವ್ಯಾಪ್ತಿಯಲ್ಲಿ ಚಿಂತಾಮಣಿಯಿಂದ 40ಕಿ.ಮೀ. ದೂರ, ಕೆಂಚಾನ್ ಹಳ್ಳಿಯಿಂದ 15 ಕಿ.ಮೀ. ದೂರದಲ್ಲಿ, ಇವತ್ತು ಬೆಳಿಗ್ಗೆ ಆ ಊರಿನ ದಲಿತ ಸಂಘರ್ಷ ಸಮಿತಿಯ ಸುಮಾರು 500 ಜನ ಅಲ್ಲಿ ಅಂಬೇಡ್ಕರ್ ಜಯಂತಿಯನ್ನು ಆಚರಿಸಬೇಕೆಂದು ಸೇರಿದರು, ಆಗ ಆ ಊರಿನ ಇನ್ನೊಂದು ಜನಾಂಗದವರೊಂದಿಗೆ ಗಲಾಟೆಯಾಗಿದೆ ಅಲ್ಲಿ ಪೋಲಿಸ್‌ನವರು ಮಧ್ಯ ಪ್ರವೇಶ ಮಾಡಿದಾಗ ಅವರ ಎರಡು ವ್ಯಾನ್‌ಗಳನ್ನು ಸುಟ್ಟು ಹಾಕಿದ್ದಾರೆ ಮತ್ತು 3ಜನ ಪೋಲಿಸಿನವರು ತೀವ್ರವಾಗಿ ಗಾಯಗೊಂಡು ತೀರಿಕೊಂಡರು, ಅವರ ಹೆಸರು ನರಸಿಂಹ ಎಂದು ಪೋಲಿಸ್ ಕಾನ್‌ಸ್ಟೇಬಲ್, ಅಬ್ದುಲ್ ರಶೀದ್ ಎಂದು ಹೆಡ್ ಕಾನ್‌ಸ್ಟೇಬಲ್, ಸುಧಾಕರ ಪೋಲಿಸ್ ಕಾನ್‌ಸ್ಟೇಬಲ್. ಇಲ್ಲಿ ಸುಧಾಕರ ರೆಡ್ಡಿ ಎನ್ನುವ ಸಿವಿಲಿಯನ್ ಕೂಡ ತೀರಿಕೊಳ್ಳುತ್ತಾರೆ. ಸುಮಾರು 12 ಜನ ಗಾಯಗೊಂಡಿದ್ದಾರೆ. They have been treated as out-patients Head constable, he is still serious. Correct picture about the causes and other details will be known after the receipt of report from DGP, SP. ಅಲ್ಲಿ ಎಡಿಜಿ ಯವರು ಹೋಗಿ ಏನು ಆಯಿತು, ಹೇಗೆ ಆಯಿತು ಎಂದು ವಿವರವನ್ನು ಸ್ವಲ್ಪ ಸಮಯದಲ್ಲಿ ಕಳುಹಿಸುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಗೋಲಿಬಾರ್ ನಡೆಯುವಂತಹ ಪರಿಸ್ಥಿತಿ ಹೇಗೆ ಉದ್ಭವ ವಾಯಿತು?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಬಿಲ್ಲಾಳ್ ಹಳ್ಳಿ ಎನ್ನುವುದು ಒಂದು ಸಣ್ಣ ಹಳ್ಳಿ. ನಾನು ಅದೇ ತಾಲ್ಲೂಕಿನಿಂದ ಬಂದವನು ಈಗ ಅಲ್ಲಿ ಇಲ್ಲ. ಅಲ್ಲಿ ಜಾಸ್ತಿ ಎಂದರೆ 100 ರಿಂದ 150 ಮನೆಗಳು ಇರತಕ್ಕಂತಹ ಸಣ್ಣ ಹಳ್ಳಿ. ಅಲ್ಲಿ 500 ಜನ ಹೇಗೆ ಇರಲು ಸಾಧ್ಯ? ಅಲ್ಲಿ ಗಲಾಟೆ ಯಾಗಲು ಅಲ್ಲಿಯ ಜನರು ಕಾರಣರಲ್ಲ, ಹಾಗಾದರೆ ಇದಕ್ಕೆ ಏನು ಕಾರಣ ಎನ್ನುವುದನ್ನು ಹೇಳಿದರೆ ಒಳ್ಳೆಯದು.

ಶ್ರೀ ಆರ್. ರೋಷನ್ ಬೇಗ್ : ಮಾನ್ಯ ಅಧ್ಯಕ್ಷರೆ, ಕಾರಣ ಏನು ಎನ್ನುವುದಕ್ಕೆ ಅಲ್ಲಿಂದ ಡಿಸಿಪಿಯವರಿಂದ ವರದಿ ಬಂದಮೇಲೆ ವಿವರಕೊಡುತ್ತೇನೆ. ಸಧ್ಯಕ್ಕೆ ಇಷ್ಟು ತಿಳಿದಿದೆ, ಒಬ್ಬ ಕಾನ್‌ಸ್ಟೇಬಲ್ ಸಿರೀಯಸ್ ಆಗಿದ್ದಾನೆ, ಈಗ ಅರ್ಧ ಗಂಟೆ ಮುಂಚೆ ವಿಚಾರಿಸಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಪೋಲಿಸಿನವರು ಹೇಗೆ ಸತ್ತರು, ಅಲ್ಲಿಯ ಪರಿಸ್ಥಿತಿ ಏನು?

ಅಧ್ಯಕ್ಷರು : ಅದನ್ನೇ ಅವರು ಹೇಳುತ್ತಿರುವುದು, ಡಿಜಿಪಿ ಯವರು, ಎಡಿಜಿ ಯವರು ಮತ್ತು ಜಿಲ್ಲಾವರಿಷ್ಠಾಧಿಕಾರಿಗಳು ಎಲ್ಲರೂ ಸ್ಥಳದಲ್ಲಿ ಇದ್ದಾರೆ, ಈ ತಕ್ಷಣಕ್ಕೆ ಇಷ್ಟು ಮಾಹಿತಿ ಲಭ್ಯವಾಗಿದೆ, ಅಲ್ಲಿ ಎಲ್ಲರೂ ಸ್ಥಳದಲ್ಲಿ ಇದ್ದು ಪರಿಸ್ಥಿತಿಯನ್ನು ಹತೋಟಿಗೆ ತರಲು ಪ್ರಯತ್ನ ಮಾಡುತ್ತಿದ್ದಾರೆ, ಉಳಿದ ಎಲ್ಲಾ ವಿವರ ಬಂದ ಮೇಲೆ ನಾಳೆ ಒಂದು ಹೇಳಿಕೆ ಮಾಡುತ್ತಾರೆ. ಈ ಸಧ್ಯಕ್ಕೆ ಇಷ್ಟು ಲಭ್ಯ ಇದೆ ಎಂದು ಹೇಳುತ್ತಿದ್ದಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಪೋಲಿಸ್‌ರು ಫೈರಿಂಗ್‌ನಲ್ಲಿ ಸತ್ತರೂ ಅಥವಾ ಹೊಡೆದಾಟದಲ್ಲಿ ಸತ್ತರೊ ಅಷ್ಟಾದರೂ ಮಾಹಿತಿ ಕೊಡಬಹುದಲ್ಲಾ.

ಅಧ್ಯಕ್ಷರು : ಫೈರಿಂಗ್ ಆದರೆ ಪೋಲಿಸ್‌ನವರು ಏಕೆ ಸಾಯುತ್ತಾರೆ? ಆ ಊರಿನ ಪೋಲಿಸ್‌ನವರು restraint ಆಗಿದ್ದರು ಎಂದು ಕಾಣುತ್ತದೆ, ಮಾರ್ಚ್ ವಾಯಿಲೆನ್ಸ್‌ನಲ್ಲಿ ಪೋಲಿಸರು ಸತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನನಗೆ ಒಂದು ಅಂಶ ಅರ್ಥವೇ ಆಗುತ್ತಾ ಇಲ್ಲ, ಇಂಥ ಘಟನೆಗಳು ಸ್ವಲ್ಪ ಜಾಸ್ತಿಯಾಗುತ್ತಿವೆ. ಇದಕ್ಕೆ ಕಾರಣ ಏನು? ಇದರ ಹಿನ್ನೆಲೆ ಏನು? ಎಂದು ತಿಳಿದುಕೊಳ್ಳುವುದು ಅವಶ್ಯಕವಾಗಿದೆ. ಇಂಟಲಿಜೆನ್ಸ್ ಡಿಪಾರ್ಟ್‌ಮೆಂಟ್‌ನವರು ಇದರ ಬಗ್ಗೆ ಚಿಂತನೆ ಮಾಡಬೇಕು. ಇದು ಒಂದೇ ಕಡೆಯಲ್ಲ, ಚಿಂತಾಮಣಿಯಲ್ಲಿ ಒಂದು ಜಯಂತಿ ಮಾಡು ವಂತಹ ಒಂದು ಸಂದರ್ಭದಲ್ಲಿ ಇಂಥ ಒಂದು ಘಟನೆ ನಡೆಯಬೇಕಾದರೆ ಇದಕ್ಕೆ ಕಾರಣಕರ್ತರು ಯಾರು? ಇದರ ಹಿನ್ನೆಲೆಯಲ್ಲಿ ಯಾರು ಇದ್ದಾರೆ? ಯಾಕೆ ಈ ಘರ್ಷಣೆಗಳು ನಡೆಯುತ್ತಿವೆ, ನಾನು ಹೇಳುವುದು ಚಿಂತಾಮಣಿ ಒಂದೇ ವಿಷಯವನ್ನು ಅಲ್ಲ, ಮೊನ್ನೆ ಶಹಪುರದಲ್ಲಿ ನಡೆದಿದ್ದು

ಇದೇ ಘಟನೆ, ಯಾವುದೋ ಒಂದು ಸಣ್ಣ ಕಾರಣಕ್ಕೆ ನಡೆದ ಘಟನೆಯಿಂದ ಇಡೀ ಸಮಾಜದ ಮನೆಗಳನ್ನು ಸುಟ್ಟುಹಾಕು ವಂತಹ ಕೆಲಸ ಅಲ್ಲಿ ನಡೆಯಿತು. ಯಾವುದೋ ಘಟನೆಗೆ ಒಬ್ಬ ಮಂಡಲ್ ಪ್ರಧಾನದ ಕೊಲೆ ಆಗಿರತಕ್ಕಂತದ್ದು ಆಳಂದದಲ್ಲಿ ಆಯಿತು, ಯಾವುದೋ ಘಟನೆಗೆ ಒಬ್ಬ ಕಾರ್ಯಕರ್ತನ ಕೊಲೆ ಮಾಡತಕ್ಕತದು ಸೇಡಂನಲ್ಲಿ ಆಯಿತು, ಇದೇ ರೀತಿಯಾಗಿ ಸಣ್ಣ-ಪುಟ್ಟ ಘಟನೆಗಳು ನಡೆಯುತ್ತಿವೆ, ಇವತ್ತು ಏನು ಆಗಿದೆ ಎಂದರೆ ಈ ಒಂದು ದಲಿತ ಜನಾಂಗಕ್ಕೆ ವಿಶೇಷವಾಗಿ ಈ ಸಪ್ರೆಸ್ಡ್ ಕ್ಲಾಸಸ್‌ಗೆ, ಇವರನ್ನು ಸಮಾಜದಿಂದ ಬೇರೆ ಮಾಡಬೇಕು ಎನ್ನುವ ಒಳಸಂಚು ನಡೆದಿದೆ ಏನೋ ಅಥವಾ ಯಾರಾದರೂ ಇಂಥ ಘಟನೆಗಳಿಗೆ ಪ್ರಚೋದನೆ ಕೊಟ್ಟು ಸಮಾಜದಲ್ಲಿ ಹೆಚ್ಚಿನ ವೈಮನಸ್ಸು ಹುಟ್ಟಲಿ ಎನ್ನತಕ್ಕ ಏನಾದರೂ ಕುತಂತ್ರವಿದೆಯೋ ಎಂಬುದು ಗೊತ್ತಾಗಬೇಕಾಗುತ್ತದೆ. ಏಕೆಂದರೆ ಒಂದೆರಡು ಘಟನೆಯಾಗಿದ್ದರೆ ನಾವು ಒಪ್ಪಿಕೊಳ್ಳ ಬಹುದಾಗಿತ್ತು. series of incidents ಅದು ಐದಾರು ತಿಂಗಳಲ್ಲಿ ನಡೆದಿದೆ. ಅದು ವಸಂತಕುಮಾರ್ ಘಟನೆ ಇರಬಹುದು, ಆಳಂದ್‌ನ ಗಾಣಗಾಪುರದಲ್ಲಾದ ದತ್ತಾತ್ರಯ, ದತ್ತು ಎಂಬುವರ ಘಟನೆ ಇರಬಹುದು, ಇದರ ಹಿನ್ನೆಲೆ ಏನಿದೆ ಎಂದು ಇಡೀ ಗುಪ್ತ ದಳ ಇಲಾಖೆಯವರು ಕೆಲಸ ಮಾಡಬೇಕು ಇಂಥ ಘಟನೆಗಳನ್ನು ತಾವು ತಡೆಗಟ್ಟದಿದ್ದರೆ ಖಂಡಿತವಾಗಿ ಸಮಾಜದಲ್ಲಿ ಮುಂದೆ ವೈಮನಸ್ಸು ಜಾಸ್ತಿ ಬೆಳೆದು ಹೊಡೆದಾಟವಾಗಿ ಕೊನೆಗೆ ಏನಾಗುತ್ತದೆ ಎಂಬುದನ್ನು ನೋಡಬೇಕು. ಇವತ್ತು ಲೇಖನಗಳೂ ಸಹ ಅದೇ ರೀತಿ ಬರುತ್ತಿದೆ, ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಿಲ್ಲ, ಇಲ್ಲದಿರುವುದನ್ನು ಸೃಷ್ಟಿ ಮಾಡತಕ್ಕದ್ದು, ಇಲ್ಲದಿರುವ ವಿಚಾರದ ಬಗ್ಗೆ ಪುಸ್ತಕಗಳನ್ನು ಬರೆದು ಸಮಾಜದಲ್ಲಿ ಕೆಟ್ಟ ವಾತಾವರಣ ಸೃಷ್ಟಿ ಮಾಡುವುದು, ಒಬ್ಬರಿಗೊಬ್ಬರಿಗೆ ಜಲಸಿ ಆಗಲಿ ಕೆಟ್ಟ ಪರಿಸ್ಥಿತಿಯನ್ನು ತರತಕ್ಕದ್ದು ಇವತ್ತು ಆಗುತ್ತಿದೆ. ಅದರ ಬಗ್ಗೆ ವರದಿಯನ್ನು ತರಿಸಿಕೊಂಡು ಇಂಥ ಘಟನೆಗಳಿಗೆ ಹತೋಟಿ ಮಾಡದಿದ್ದರೆ ಇದು ಮುಂದೆ ಹಳ್ಳಿಹಳ್ಳಿಗೆ ಹಬ್ಬುತ್ತದೆ. ಇವತ್ತು ಜಿಲ್ಲೆಜಿಲ್ಲೆಗಳಲ್ಲಿ ಇದು ನಡೆದಿದೆ. ಒಂದು ವರ್ಷದಲ್ಲಿ ಇಂಥ ಘಟನೆಗೆ ಹೆಚ್ಚು ಪ್ರೋತ್ಸಾಹ ಕೊಡತಕ್ಕ ಜನರು ಹುಟ್ಟುತ್ತಿದ್ದಾರೆ ಎಂಬುದನ್ನು ನಾವು ನೋಡುತ್ತಿದ್ದೇವೆ. ಇವೆಲ್ಲವನ್ನೂ ತಿಳಿದುಕೊಂಡು ಇದರ ಬಗ್ಗೆ ಸವಿಸ್ತಾರವಾಗಿ ಮಾಹಿತಿ ತರಿಸಿ ನಾಳೆ ನಾವು ಸದನ ಸೇರಿದ ಕೂಡಲೇ ಸ್ಟೇಟ್‌ಮೆಂಟ್ ಮಾಡಿಸಿದರೆ ಒಳ್ಳೆಯದಾಗುತ್ತದೆ. ಮತ್ತು ಇಂಥ ಘಟನೆ ರಾಜ್ಯದಲ್ಲಿ ಎಲ್ಲೂ ಆಗಬಾರದು, ಎಲ್ಲರೂ ಬಂಧುಗಳಂತಿರಬೇಕು, ಒಗ್ಗಟ್ಟಿನಿಂದ ಇರಬೇಕು ಎಂದು ಸಂದೇಶವನ್ನು ಕಳುಹಿಸಬೇಕು. ಇಂಥ ಘಟನೆಯನ್ನು ಎಕ್ಸ್‌ಪ್ಲಾಯಿಟ್ ಮಾಡತಕ್ಕ ಜನರು ಎಲ್ಲಾ ಸಮಾಜದಲ್ಲಿದ್ದಾರೆ. ಕೆಲವು ಎಕ್ಸ್‌ಟ್ರೀಮ್ ಜನರು ಬಡವರಲ್ಲೂ ಇರುತ್ತಾರೆ. ಮೇಲು ವರ್ಗದಲ್ಲೂ ಇರುತ್ತಾರೆ. ಮೇಲುಬರುವುದನ್ನು ಇವರು ಸಹಿಸುವುದಿಲ್ಲ. ಅದೇ ನೆಪವನ್ನಿಟ್ಟು ಕೊಂಡು ಕೆಳವರ್ಗದವರನ್ನು ತುಳಿಯತಕ್ಕಂಥ ಸಾಧ್ಯತೆಗಳೂ ಸಹ ಇರುತ್ತದೆ. ಇವೆರಡನ್ನು ತಿಳಿದುಕೊಂಡು ಸರ್ಕಾರದಿಂದ ಇದರ ಬಗ್ಗೆ ಸಾರ್ವಜನಿಕರಿಗೆ ಸಂದೇಶ ಹೋಗದಿದ್ದರೆ ಇಂಥ ಘಟನೆಗಳು ಮುಂದುವರೆಯುತ್ತದೆ. ಆದ್ದರಿಂದ ದಯವಿಟ್ಟು ಇದರ ಬಗ್ಗೆ ಸ್ಟೇಟ್‌ಮೆಂಟನ್ನು ನಾಳೆ ಮಾಡಿಸಬೇಕು. ಮತ್ತು ಜನತೆಗೆ ಸಂದೇಶವನ್ನು ಕಳಿಸಬೇಕು.

ಶ್ರೀ ಆರ್. ರೋಷನ್‌ಬೇಗ್ : ಮಾನ್ಯ ಅಧ್ಯಕ್ಷರೆ, ವಿರೋದಪಕ್ಷದ ನಾಯಕರು ಬಹಳ ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ನಾಳೆ ಬೆಳಿಗ್ಗೆ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಹೇಳುದ್ದು ಸರಿಯಾಗಿದೆ. ಕೋಲಾರ ಜಿಲ್ಲೆಯಲ್ಲಿ ಈ ತಿಂಗಳಿನಲ್ಲಿ ಇಂಥ ಎರಡುಮೂರು ಘಟನೆಗಳು ನಡೆದಿದೆ. ಗುಪ್ತದಳದ ವರದಿಯನ್ನು ತರಿಸಿ ನಿಜವಾದಂಥ ಕಾರಣವೇನು ಎಂಬುದನ್ನು ಸದನದ ಮುಂದಿಟ್ಟರೆ ಒಳ್ಳೆಯದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇಬ್ಬರು ಪೋಲೀಸ್‌ನವರು ಸಾಯಬೇಕಾದ ಪರಿಸ್ಥಿತಿ ಉದ್ಭವವಾಗಬೇಕಾದರೆ ಪೋಲೀಸರಿಗೆ ಅಲ್ಲಿ ನಡೆಯುತ್ತಿರುವ ವಿದ್ಯಾಮಾನಗಳ ಬಗ್ಗೆ ಗೊತ್ತಿರಬೇಕಾಗುತ್ತದೆ. ಅವರು ಮೊದಲೇ ಎಚ್ಚರವಹಿಸಿದ್ದರೆ ಈ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ. ಆ ಕೆಲಸವನ್ನು ಮಾಡುವಲ್ಲಿ ಪೋಲೀಸರು ಸಂಪೂರ್ಣವಾಗಿ ವಿಫಲವಾಗಿದ್ದಾರೆ. ಪೋಲೀಸರೇ ಸಾಯುವ ಮಟ್ಟದಲ್ಲಿ ಗಲಭೆಯಾಗಬೇಕಾದರೆ ಪೋಲೀಸರು ಎಚ್ಚರವಹಿಸದಿರತಕ್ಕದ್ದು ಕಾರಣ. ಇಡೀ ರಾಜ್ಯದಲ್ಲಿ ಈ ರೀತಿ ಪರಿಸ್ತಿತಿ ನಿರ್ಮಾಣವಾಗುತ್ತದೆ. ಆದ್ದರಿಂದ ಗೃಹಸಚಿವರು ಇದರ ಬಗ್ಗೆ ಮೊದಲೇ ಎಚ್ಚರ ವಹಿಸಿ ಹಳ್ಳಿಗಳಲ್ಲಿ, ತಾಲ್ಲೂಕುಗಳಲ್ಲಿ ಈ ರೀತಿ ಉದ್ಭವವಾಗುವುದನ್ನು ತಡೆಹಿಡಿಯುವುದಕ್ಕೆ ನಾವೆಲ್ಲರೂ ಪಕ್ಷಾತೀತವಾಗಿ ಇದರ ಬಗ್ಗೆ ಚರ್ಚೆ ಮಾಡಿ ರಾಜ್ಯದ ಜನತೆಗೆ ಕಳಕಳಿಯಿಂದ ಮನವಿ ಮಾಡಿ ನಾವೆಲ್ಲರೂ ಸ್ನೇಹದಿಂದ, ಸಹೋದರಭಾವದಿಂದ ಇರತಕ್ಕದನ್ನು ಹೇಳಲಿಲ್ಲವೆಂದರೆ ನಾಳೆ ಇದರ ಜ್ವಾಲೆ ಎಲ್ಲೆಲ್ಲಿಗೆ ತಲುಪುತ್ತದೆಯೋ ಗೊತ್ತಿಲ್ಲ. ಆ ದೃಷ್ಟಿಯಿಂದ ಈ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಮತ್ತು ತಮ್ಮ ಗುಪ್ತದಳವನ್ನು ಎಲ್ಲೆಲ್ಲಿ ಇಂಥದ್ದು ಆಗಿದೆ ಅಲ್ಲಿ ಯಾವ್ಯಾವ ರೀತಿಯಲ್ಲಿ ಎಚ್ಚರ ವಹಿಸಬೇಕು ಎಂಬ ಬಗ್ಗೆ ಸರ್ಕಾರವೇನು ಕ್ರಮ ತೆಗೆದುಕೊಂಡಿದೆ ಎಂಬ ಬಗ್ಗೆ ದಯಮಾಡಿ ಹೇಳಬೇಕು.

ಶ್ರೀ ಆರ್. ರೋಷನ್‌ಬೇಗ್ : ಮಾನ್ಯ ಅಧ್ಯಕ್ಷರೆ, ನಾಳೆ ಇದರ ಬಗ್ಗೆ ವಿವರವಾದ ಸ್ಟೇಟ್‌ಮೆಂಟನ್ನು ಮಾಡುತ್ತೇನೆ. ಮಾನ್ಯ ಖಿರ್ಗೆಯವರು ಮತ್ತು ವಾಟಾಳ್ ನಾಗರಾಜ್‌ರವರು ಏನು ಹೇಳಿದ್ದಾರೆ, ಅದಕ್ಕೆ ಸಂಬಂಧಿಸಿದಂತೆ ನನ್ನ ಸಲಹೆ ಏನೆಂದರೆ, ಮಧ್ಯಾಹ್ನ ಲಂಚ್‌ನ ಸಮಯದಲ್ಲಿ ತಮ್ಮ ಕೊಠಡಿಯಲ್ಲಿ ಇವರನ್ನೆಲ್ಲ ಕರೆದು a Joint appeal from the Government as well as from the Leader of the opposition...

Mr. SPEAKER : An Appeal from the House..

Sri. R. ROSHAN BAIG : An appeal from the House ಮಾಡೋಣ.

ಅಧ್ಯಕ್ಷರು : ಈಗ ಸದನವನ್ನು ಮುಂದೂಡಲಾಗಿದೆ, ಮತ್ತೆ ಸದನವು ನಾಳೆ ಬೆಳಿಗ್ಗೆ 10 ಗಂಟೆಗೆ ಸಮಾವೇಶಗೊಳ್ಳುತ್ತದೆ.

(ಸದನವು ರಾತ್ರಿ 8-35ಕ್ಕೆ ಮುಂದೂಡಲ್ಪಟ್ಟು ಮತ್ತೆ ದಿನಾಂಕ : 2ನೇ ಸೆಪ್ಟೆಂಬರ್ 1997ರ ಬೆಳಿಗ್ಗೆ 10 ಗಂಟೆಗೆ ಸೇರಲು ತೀರ್ಮಾನಿಸಿತು)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)